**<u>Spl.C.(Corruption)/03/2016</u>**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿ ಡಬ್ಲೂಃ** 3

**ಪಿ ಡಬ್ಲೂಃ** 2

**<u>ಸಾಕ್ಷಿಯನ್ನು ದಿನಾಂಕಃ 28-03-2026 ರಂದು ಪ್ರಾಮಾಣೀಕರಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಪಿ. ಪಿ. ಅವರಿಂದ</u>**

ಆರೋಪಿ ಲಂಚದ ಹಣವನ್ನು ತನ್ನ ಶರ್ಟಿನ ಎಡ ಜೇಬಿನಲ್ಲಿ ಇಟ್ಟಿದ್ದ. ಪೋಲಿಸರು ಆರೋಪಿಗೆ ಬೇರೆ ಶರ್ಟಿನ ವ್ಯವಸ್ಥೆ ಮಾಡಿ ಆತ ಧರಿಸಿದ್ದ ಶರ್ಟನ್ನು ಬಿಚ್ಚಿಸಿ ಅಮಾನತ್ತು ಪಡಿಸಿಕೊಂಡರು. ಸದರಿ ಶರ್ಟನ್ನು ದ್ರಾವಣದಲ್ಲಿ ಎದ್ದಿದಾಗ ಶರ್ಟಿನ ಜೇಬಿನ ಬಳಿ ಗುಲಾಬಿ ಬಣ್ಣಕ್ಕೆ ತಿರುಗಿತ್ತು. ದ್ರಾವಣ ಕೂಡಾ ಬಣ್ಣ ಬದಲಾಗಿತ್ತು. ಅದನ್ನು ಪೋಲಿಸರು ಮಹಜರು ಅಡಿಯಲ್ಲಿ ಅಮಾನತ್ತು ಪಡಿಸಿಕೊಂಡರು. ಸದರಿ ಶರ್ಟ ನೋಡಿದರೆ ಗುರುತಿಸಬಲ್ಲೆ. ಅದನ್ನು ಮು ಮಾ **6** ಎಂದು ಗುರುತಿಸಲಾಯಿತು. ಈ ಪ್ರಕ್ರಿಯೆಯನ್ನು ನಿಪಿಃ **3** ಮಹಜರು ನಲ್ಲಿ ದಾಖಲಿಸಿದ್ದು, ನಿಪಿಃ **3** (ಎ) ನನ್ನ ಸಹಿ. ಪೋಲಿಸರು ಆರೋಪಿಯ ಬಂಧನ ಕ್ರಮ ಜರುಗಿಸಿ ಪಿರ್ಯಾದಿಗೆ ಸಂಬಂಧಿಸಿದ ಕಡತಗಳನ್ನು ಅಮಾನತ್ತುಪಡಿಸಿಕೊಂಡರು. ಅದನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿಃ **14** ಎಂದು ಗುರುತಿಸಲಾಗಿದ್ದು, ಸಹಿಯನ್ನು ನಿಪಿಃ **14** (ಎ) ಎಂದು ಗುರುತಿಸಲಾಯಿತು. (ಪುಟ ಸಂಖ್ಯೆಃ **35** ರಿಂದ **69**).

ಆ ದಿನ ಟ್ರಾಪ್ ಮಾಡಿದ ಆರೋಪಿ ಈ ದಿನ ನ್ಯಾಯಾಲಯದ ಮುಂದಿರುವ ವ್ಯಕ್ತಿಯಾಗಿರುತ್ತಾರೆ. **9** ನೇ ತಾರೀಖಿ ನಂದು ನಾನು ನ್ಯಾಯಾಧೀಶರ ಮುಂದೆ ಹಾಜರು ಆಗಿ ಕಲಂ. **164** ಸಿ ಆರ್ ಪಿ ಸಿ ಅಡಿಯಲ್ಲಿ ಹೇಳಿಕೆ ನೀಡಿದ್ದು, ಅದನ್ನು ನಿಪಿಃ **17** ಎಂದು, ಸಹಿಯನ್ನು ನಿಪಿಃ **17** (ಎ) ಎಂದು ಗುರುತಿಸಲಾಯಿತು. ಅದರಲ್ಲಿ ಹೇಳಿರುವ ವಿಚಾರಗಳು ಸತ್ಯವಾಗಿರುತ್ತವೆ. ಇದಾಗಿ **10** ದಿನಗಳ ನಂತರ ಲೋಕಾಯುಕ್ತ ಪೋಲಿಸರು ಠಾಣೆಗೆ ಕರೆಯಿಸಿ ಪಿರ್ಯಾದಿಯ ಮೊಬೈಲ್ ನಲ್ಲಿದ್ದ ಧ್ವನಿಯನ್ನು ಸಿಡಿ ಗೆ ವರ್ಗಾಹಿಸಿದರು. ಆರೋಪಿ ಕಚೇರಿಯ ಮೇಲಾಧಿಕಾರಿಗಳು ಹಾಜರು ಇದ್ದು, ಸದರಿ ಧ್ವನಿಯನ್ನು ಗುರುತಿಸಿದ್ದು, ಆ ಸಮಯಲ್ಲಿ ನಿಪಿಃ **16** ರಂತೆ ಮಹಜರು ಜರುಗಿಸಿ, ನಿಪಿಃ **16**(ಬಿ) ರಂತೆ ನನ್ನ ಸಹಿ ಪಡೆದುಕೊಂಡರು.

ಈ ಎಲ್ಲಾ ಪ್ರಕ್ರಿಯೆಗಳ ಪೋಟೋಗಳನ್ನು ತೆಗೆದಿದ್ದು, ಅವುಗಳನ್ನು ಈಗಾಗಲೇ ನಿಪಿಃ 2 ಎಂದು ಗುರುತಿಸಲಾಗಿದೆ. ಆ ಪೋಟೋದಲ್ಲಿ ಆರೋಪಿ, ನಾನು ಹಾಗೂ ಇತರೆ ಸಾಕ್ಷಿಗಳು ಕೂಡಾ ಇದ್ದೇವೆ. ಪೋಲಿಸರ ಮುಂದೆ ನನ್ನ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ವಾಯ್ ಎಂ., ವಕೀಲರಿಂದಃ**

ಈ ಹಂತದಲ್ಲಿ ವಕೀಲರು ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ಯಾವುದೇ ಸಕಾರಣ ಇಲ್ಲದ ಕಾರಣ ಹಾಗೂ ಈ ಪ್ರಕರಣ 2016 ರ ಪ್ರಕರಣವಾಗಿದ್ದು, 10 ವರ್ಷಕ್ಕೂ ಮೇಲ್ಪಟ್ಟ ಹಳೆಯ ಪ್ರಕರಣವಾದ ಪ್ರಯುಕ್ತ ಕಾಲಾವಕಾಶ ನಿರಾಕರಿಸಲಾಗಿದೆ.

ಮರು ವಿಚಾರಣೆಃ ಇಲ್ಲಾ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ವಿಜಯನಗರ ಜಿಲ್ಲೆ, ಹೊಸಪೇಟೆ.